MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 1-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಆಗಸ್ಟ್ ತಿಂಗಳಿಗೆ 22 ಲಕ್ಷ ಟನ್ ಸಕ್ಕರೆ ಕೋಟಾ

ಸರಕಾರ ಆಗಸ್ಟ್ ತಿಂಗಳಿಗೆ ದೇಶದ ಸಕ್ಕರೆ ಮಾರಾಟ ಕೋಟಾ 22 ಲಕ್ಷ ಟನ್ ಗಳಿಗೆ ನಿಗದಿ ಪಡಿಸಿದೆ. 2021 ರ ಆಗಸ್ಟ್ ತಿಂಗಳಿಗೆ ನಿಗದಿಪಡಿಸಿದ ಸಕ್ಕರೆ ಕೋಟಾಕ್ಕಿಂತ 1 ಲಕ್ಷ ಟನ್ ಹೆಚ್ಚು ನಿಗದಿಯಾಗಿದ್ದು, ಈ ತಿಂಗಳಲ್ಲಿ ಹೆಚ್ಚಿನ ಹಬ್ಬಗಳು ಬರುವುದರಿಂದ ಹೆಚ್ಚಿನ ಬೇಡಿಕೆಯಿರಬಹುದೆನ್ನಲಾಗಿದೆ. ಸರಕಾರ 1.2 ಮಿಲಿಯನ್ ಟನ್ ಸಕ್ಕರೆ ಕೋಟಾ ಹೆಚ್ಚುವರಿಯಾಗಿ ರಫ್ತು ಮಾಡಲು ಅವಕಾಶ ನೀಡಿದೆಯೆನ್ನಲಾಗಿದೆ.

## ಜುಲೈ ತಿಂಗಳ ಮಲೇಶೀಯನ್ ಪಾಮೆಣ್ಣೆ ರಫ್ತು 0.8 ಶೇಕಡಾ ಹೆಚ್ಚಳ

ಜುಲೈ ತಿಂಗಳಲ್ಲಿ ಮಲೇಶೀಯನ್ ಪಾಮೆಣ್ಣೆ ರಫ್ತು ಜೂನ್ ತಿಂಗಳ 1,268,523 ಟನ್‌ಗಳಿಂದ 1,278,579 ಟನ್‌ಗಳಿಗೆ 0.8 ಶೇಕಡಾ ಹೆಚ್ಚಳವಾಗಿದೆಯೆಂದು ಕಾರ್ಗೋ ಸರ್ವೇಯರ್ ITS ಹೇಳಿದೆಯೆನ್ನಲಾಗಿದೆ. ಹಿಂದಿನ ನಾಲ್ಕು ಅವಧಿಗಳಲ್ಲಿ ಹೆಚ್ಚಳ ಕಂಡಿದ್ದ ಪಾಮೆಣ್ಣೆ ಫ್ಯೂಚರ್ ದರ 3 ಶೇಕಡಾಕ್ಕಿಂತ ಹೆಚ್ಚು ಇಳಿಕೆಯಾಗಿದೆಯೆನ್ನಲಾಗಿದೆ. ಚಿಕಾಗೋ ಸೋಯಬೀನ್ ಎಣ್ಣೆ ದರ 1.5 ಶೇಕಡಾ ಇಳಿಕೆಯಾಗಿದೆ.

## ಅಮೇರಿಕಾ ಒಣಹವೆಯಿಂದ ಸೋಯಾಬೀನ್ ಜೋಳ ದರ ಹೆಚ್ಚಳ

ಹೊಸ ಬೆಳೆಯ ಬೆಳೆಯುವ ಅವಧಿಯಲ್ಲಿ ಈಗ ಅಮೇರಿಕಾದಲ್ಲಿ ಮಳೆ ಕಡಿಮೆಯಾಗಿದ್ದು, ಒಣಹವೆ ಮುಂದುವರಿಯುತ್ತಿರುವುದರಿಂದ ಸೋಯಾಬೀನ್ ಹಾಗೂ ಜೋಳ ಉತ್ಪಾದನೆ ಇಳಿಕೆಯ ಸಾಧ್ಯತೆಯಿದೆಯೆನ್ನಲಾಗಿದ್ದು, ದರಗಳು ಚಿಕಾಗೋ ಮಾರುಕಟ್ಟೆಯಲ್ಲಿ ಹಿಂದಿನ ವಾರದಿಂದ ಹೆಚ್ಚಳವಾಗುತ್ತಿವೆಯೆನ್ನಲಾಗಿದೆ. ಬ್ರೆಜಿಲ್ ಹಾಗೂ ಇತರ ರಾಜ್ಯಗಳ ಸೋಯಾಬೀನ್ ದರ ಹೆಚ್ಚಳಗೊಂಡಿದ್ದು ಈಗ ಸ್ವಲ್ಪ ಮಟ್ಟಿನ ಇಳಿಕೆಯಾಗಿದೆಯೆನ್ನಲಾಗಿದೆ. ಯುಕ್ರೈನ್‌ನಿಂದ ಪೂರೈಕೆ ಆರಂಭವಾಗುವ ಸಾಧ್ಯತೆಯಿದ್ದು ರಫ್ತು ಆರಂಭಗೊಂಡಲ್ಲಿ ದರ ಇಳಿಕೆಯಾಗುವ ಸಾಧ್ಯತೆಯಿದೆ.

## ಭತ್ತ ಬಿತ್ತನೆ ಪ್ರದೇಶ ಇಳಿಕೆ

ಈ ಖಾರೀಫ್ ಬೆಳೆಯಲ್ಲಿ ಇದುವರೆಗೆ 231.59 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 267.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿತ್ತೆನ್ನಲಾಗಿದೆ.